**Akashvani : Bangalore**
**National Bulletin In Kannada**
**02.02.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.02.2025 / 7.35 am**

**<><*<><>*><>**

ಮುಖ್ಯಾಂಶಗಳು

- ೧. ದೆಹಲಿ ವಿಧಾನಸಭಾ ಚುನಾವಣೆ; ನಾಳೆ ಬಹಿರಂಗ ಪ್ರಚಾರ ಅಂತ್ಯ; ಗರಿಗೆದರಿದ ಚುನಾವಣಾ ಅಖಾಡ
- ೨. ಛತ್ತೀಸ್‌ಗಢದ ಬಿಜಾಪುರದಲ್ಲಿ ಭದ್ರತಾ ಪಡೆಗಳ ಗುಂಡಿನ ಚಕಮಕಿ; ೮ ಮಂದಿ ಮಾವೋವಾದಿಗಳು ಹತ
- ೩. ಮೆಕ್ಸಿಕೋ, ಕೆನಡಾ ಹಾಗೂ ಚೀನಾದ ವಸ್ತುಗಳ ಮೇಲೆ ಆಮದು ಸುಂಕ ವಿಧಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್
- ೪. ೧೯ ವರ್ಷದೊಳಗಿನವರ ಮಹಿಳೆಯರ ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್: ಫೈನಲ್‌ನಲ್ಲಿಂದು ಭಾರತ - ದಕ್ಷಿಣ ಆಫ್ರಿಕಾ ಮುಖಾಮುಖಿ

**<><*<><>*><>**

ದೆಹಲಿ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ನಾಳೆ ತೆರೆಬೀಳಲಿದ್ದು, ಮತದಾರರನ್ನು ತಮ್ಮತ್ತ ಸೆಳೆಯಲು ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ವಿವಿಧೆಡೆ ಸರ್ವಜನಿಕ ಸಭೆ, ರ‍್ಯಾಲಿ, ರೋಡ್‌ಶೋ ನಡೆಸುತ್ತಿದ್ದಾರೆ. ಹಿರಿಯ ಬಿಜೆಪಿ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಮಧ್ಯಾಹ್ನ ಆರ್‌ಕೆ ಪುರಂನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪಕ್ಷದ ನಾಯಕ ಮತ್ತು ಕೇಂದ್ರ ಸಚಿವ ರಾಜನಾಥ್ ಸಿಂಗ್, ರಾಜಿಂದರ್ ನಗರ, ಚಾಂದನಿ ಚೌಕ್ ಮತ್ತು ಲಕ್ಷ್ಮೀ ನಗರದಲ್ಲಿ ರ‍್ಯಾಲಿಗಳನ್ನು ನಡೆಸಲಿದ್ದಾರೆ. ಬಿಜೆಪಿ ಹಿರಿಯ ನಾಯಕ ಮತ್ತು ಗೃಹ ಸಚಿವ ಅಮಿತ್ ಶಾ ನಿನ್ನೆ ದೆಹಲಿಯಲ್ಲಿ ಹಲವಾರು ರ‍್ಯಾಲಿಗಳನ್ನು ನಡೆಸಿದರು. ಈ ವೇಳೆ ಅವರು, ಅಣ್ಣಾ ಹಜಾರೆ ಚಳವಳಿಯ ಸಮಯದಲಿ ಆಪ್ ನಾಯಕ ರಾಜಕೀಯ ಪಕ್ಷವನ್ನು ರಚಿಸುವುದಿಲ್ಲ ಎಂದು ಭರವಸೆ ನೀಡುವ ಮೂಲಕ ದೆಹಲಿಯ ಜನರನ್ನು ದಾರಿ ತಪ್ಪಿಸಿದ್ದಾರೆ ಎಂದು ಆರೋಪಿಸಿದರು. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಕೂಡ ನಿನ್ನೆ ದ್ವಾರಕಾದಲ್ಲಿ ಪ್ರಚಾರ ನಡೆಸಿದರು. ಸದರ್ ಬಜಾರ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಂವಿಧಾನವನ್ನು ರಕ್ಷಿಸುವ ಕಾಂಗ್ರೆಸ್‌ನ ಬದ್ಧತೆಯನ್ನು ಪುನರುಚ್ಚರಿಸಿದರು. ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ಇಂದು ರಾಷ್ಟ್ರ ರಾಜಧಾನಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಚಾಂದನಿ ಚೌಕ್‌ನಲ್ಲಿ ಚುನಾವಣಾ ರ‍್ಯಾಲಿ ನಡೆಸಿದರು. ಈ ವೇಳೆ ಅವರು, ಬಿಜೆಪಿ ಸ್ವಹಿತಾಸಕ್ತಿಯನ್ನು ಪೂರೈಸುವ ವಿಭಜಕ ರಾಜಕೀಯವನ್ನು ಉತ್ತೇಜಿಸುತ್ತಿದೆ ಎಂದು ಆರೋಪಿಸಿದರು. ಆಪ್ ನಾಯಕ ಅರವಿಂದ್ ಕೇಜ್ರಿವಾಲ್ ನಿನ್ನೆ ಹಲವು ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ದೆಹಲಿಯ ಶಾಲೆಗಳು, ಆಸ್ಪತ್ರೆಗಳು ಮತ್ತು

ಸಾರ್ವಜನಿಕ ಸೇವೆಗಳಿಗೆ ತಮ್ಮ ಸರ್ಕಾರ ಮಾಡಿರುವ ಸುಧಾರಣೆಗಳ ಕುರಿತು ತಿಳಿಸಿದ ಅವರು, ಬಿಜೆಪಿ ಅಧಿಕಾರಕ್ಕೆ ಬಂದರೆ, ನಿವಾಸಿಗಳ ಮಾಸಿಕ ವೆಚ್ಚಗಳು ಹೆಚ್ಚಾಗುತ್ತವೆ ಎಂದು ಆರೋಪಿಸಿದರು. ೭೦ ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಇದೇ ೫ ರಂದು ಚುನಾವಣೆ ನಡೆಯಲಿದ್ದು, ಈ ತಿಂಗಳ ೮ ರಂದು ಮತ ಎಣಿಕೆ ನಡೆಯಲಿದೆ. ದೆಹಲಿ ವಿಧಾನಸಭೆಗೆ ಇದೇ ೫ರಂದು ನಡೆಯಲಿರುವ ಚುನಾವಣೆಗಳನ್ನು ಮುಕ್ತ, ನ್ಯಾಯಯುತ ಹಾಗೂ ಅಮಿಷ ಮುಕ್ತವಾಗಿ ನಡೆಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಚುನಾವಣಾ ಆಯೋಗ ದೆಹಲಿ ಮುಖ್ಯ ಚುನಾವಣಾ ಅಧಿಕಾರಿಗೆ ಸೂಚಿಸಿದೆ. ಮತದಾನದ ಮುಂಚಿನ ನಿರ್ಣಾಯಕ ೪೮ ಗಂಟೆಗಳ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ನಿರ್ವಹಿಸಲು, ಎಲ್ಲಾ ಜಿಲ್ಲಾ ಚುನಾವಣಾ ಅಧಿಕಾರಿಗಳು ಪೊಲೀಸ್ ಹಾಗೂ ವೆಚ್ಚ ವೀಕ್ಷಕರ ಸಮ್ಮುಖದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ವಿಶೇಷ ಸಭೆಗಳನ್ನು ನಡೆಸಬೇಕು ಎಂದು ಆಯೋಗ ಪತ್ರದಲ್ಲಿ ಒತ್ತಿ ಹೇಳಿದೆ. ಮತದಾರರಿಗೆ ಅಮಿಷವೊಡ್ಡುವುದನ್ನು ತಡೆಗಟ್ಟಲು ಎಲ್ಲಾ ಜಾರಿ ಸಂಸ್ಥೆಗಳು ನಿಕಟ ಮೇಲ್ವಿಚಾರಣೆ ನಡೆಸಬೇಕು ಎಂದು ಚುನಾವಣಾ ಆಯೋಗ ಒತ್ತಿ ಹೇಳಿದೆ. ಮಾದಕ ದ್ರವ್ಯ, ನಗದು, ಮದ್ಯ ಮತ್ತು ಇತರ ಅಕ್ರಮ ವಸ್ತುಗಳ ಸಾಗಣೆ ಪತ್ತೆಹಚ್ಚಲು ಅಂತರ-ರಾಜ್ಯ ಪೊಲೀಸ್ ಠಾಣೆಗಳು, ಅಬಕಾರಿ ಚೆಕ್ ಪೋಸ್ಟ್‌ಗಳು ಮತ್ತು ವಾಣಿಜ್ಯ ತೆರಿಗೆ ಚೆಕ್ ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ಕಣ್ಗಾವಲು ಮತ್ತು ಸೂಕ್ತ ತಪಾಸಣೆ ನಡೆಸಲು ಆದೇಶಿಸಿದೆ. ಹೆಚ್ಚುವರಿಯಾಗಿ, ಫ್ಲೈಯಿಂಗ್ ಸ್ಕ್ವಾಡ್, ಸ್ಟ್ಯಾಟಿಕ್ ಸರ್ವೈಲೆನ್ಸ್ ತಂಡ ಮತ್ತು ವೀಡಿಯೊ ಸರ್ವೈಲೆನ್ಸ್ ತಂಡ ಸೇರಿದಂತೆ ಚುನಾವಣಾ ವೆಚ್ಚ ಮೇಲ್ವಿಚಾರಣಾ ತಂಡಗಳು ಚುನಾವಣೆಯ ಕೊನೆಯ ೪೮ ಗಂಟೆಗಳ ಅವಧಿಯಲ್ಲಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿರಬೇಕು ಎಂದು ಸೂಚಿಸಿದೆ.

<><*<><>*><>

ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ನಿನ್ನೆ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ೮ ಮಂದಿ ಮಾವೋವಾದಿಗಳು ಹತರಾಗಿದ್ದಾರೆ. ಗಂಗಲೂರು ಪ್ರದೇಶದಲ್ಲಿ ಮಾವೋವಾದಿಗಳು ಅಡಗಿದ್ದಾರೆ ಎಂಬ ಗುಪ್ತಚರ ಮಾಹಿತಿ ಅನುಸರಿಸಿ ಜಿಲ್ಲಾ ಮೀಸಲುಪಡೆ, ಕೇಂದ್ರ ಮೀಸಲು ಪೊಲೀಸ್ ಪಡೆ- ಸಿಆರ್‌ಪಿಎಫ್, ಕಮಾಂಡೊ ಬೆಟಾಲಿಯನ್ ಫಾರ್ ರೆಸಲ್ಯೂಟ್ ಆಕ್ಷನ್-ಸಿಒಬಿಆರ್‌ಎ, ವಿಶೇಷ ಕಾರ್ಯಪಡೆಗಳನ್ನೊಳಗೊಂಡ ಜಂಟಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆಯನ್ನು ಆರಂಭಿಸಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪರಿಣಾಮವಾಗಿ ಸ್ಥಳದಲ್ಲಿ ಭದ್ರತಾ ಪಡೆಗಳು ಹಾಗೂ ಮಾವೋವಾದಿಗಳ ನಡುವೆ ಭಾರೀ ಪ್ರಮಾಣದಲ್ಲಿ ಗುಂಡಿನ ಚಕಮಕಿ ನಡೆಯಿತು. ಗುಂಡಿನ ಚಕಮಕಿಯ ನಂತರ ೮ ಮಾವೋವಾದಿಗಳ ಮೃತದೇಹಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಯಿತು. ರೈಫಲ್‌ಗಳು, ಬ್ಯಾರೆಲ್‌ಗ್ರನೇಡ್ ಲಾಂಚರ್‌ಗಳು ಸೇರಿದಂತೆ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ. ಕೊನೆಯ ವರದಿಗಳು ಬಂದಾಗ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರೆದಿತ್ತು.

<><*<><>*><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೆಕ್ಸಿಕೋ, ಕೆನಡಾ ಹಾಗೂ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸಿದ್ದಾರೆ. ನಿನ್ನೆ ರಾತ್ರಿ ಈ ಸಂಬಂಧ ಮೂರು ಕಾರ್ಯಕಾರಿ ಆದೇಶಗಳಿಗೆ ಅಧ್ಯಕ್ಷ ಟ್ರಂಪ್ ಸಹಿ ಹಾಕುವ ಮೂಲಕ ಅಮೆರಿಕದ ಪ್ರಮುಖ ಮೂರು

ವ್ಯಾಪಾರ ಪಾಲುದಾರರ ಮೇಲೆ ಸುಂಕ ವಿಧಿಸಿದ್ದಾರೆ. ಮೆಕ್ಸಿಕೋದ ಸರಕುಗಳ ಮೇಲೆ ಶೇಕಡ ೨೫ ರಷ್ಟು ಸುಂಕವನ್ನು ವಿಧಿಸಿದರೆ, ಕೆನಡಾದ ಸರಕುಗಳ ಮೇಲೆ ಶೇಕಡ ೨೫ ರಷ್ಟು, ಕೆನಡಾದ ಇಂಧನ ಮೂಲಗಳ ಮೇಲೆ ಶೇಕಡ ೧೦ ರಷ್ಟು ಸುಂಕವನ್ನು ವಿಧಿಸುವ ಕಾರ್ಯಕಾರಿ ಆದೇಶಗಳಿಗೆ ಅಧ್ಯಕ್ಷರು ಸಹಿ ಹಾಕಿದ್ದಾರೆ. ಮೂರನೇ ಕಾರ್ಯಕಾರಿ ಆದೇಶದಲ್ಲಿ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಹೆಚ್ಚುವರಿಯಾಗಿ ಶೇಕಡ ೧೦ ರಷ್ಟು ಸುಂಕವನ್ನು ವಿಧಿಸಲಾಗಿದೆ. ಅಮೆರಿಕದ ಉತ್ತರ ಹಾಗೂ ದಕ್ಷಿಣ ಗಡಿಗಳಲ್ಲಿ ಮಾದಕವಸ್ತುಗಳು ಮತ್ತು ಅಕ್ರಮ ವಲಸಿಗರ ಹರಿವನ್ನು ಪರಿಹರಿಸುವ ಪ್ರಯತ್ನವಾಗಿ ಈ ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ಅಧ್ಯಕ್ಷ ಟ್ರಂಪ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**<><*<><>*><>**

ಉತ್ತರಪ್ರದೇಶ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳ, ಕುಶಲಕರ್ಮಿಗಳು ತಮ್ಮ ಕರಕುಶಲ ವಸ್ತುಗಳು ಹಾಗೂ ಗುಡಿ ಕೈಗಾರಿಕೆಗಳ ಉತ್ಪನ್ನಗಳನ್ನು ಪ್ರದರ್ಶಿಸಲು ಅದ್ಭುತ ವೇದಿಕೆ ಸೃಷ್ಟಿಸಿದೆ.  'ಒಂದು ಜಿಲ್ಲೆ, ಒಂದು ಉತ್ಪನ್ನ' ಪ್ರದರ್ಶನ, ೭೫ ವಿಶಿಷ್ಟ ಭೌಗೋಳಿಕ ಗುರುತುಳ್ಳ ಉತ್ಪನ್ನಗಳನ್ನು ಒಳಗೊಂಡ ಉತ್ತರಪ್ರದೇಶದ ಶ್ರೀಮಂತ ಸಾಸ್ಕೃತಿಕ ಪರಂಪರೆಯನ್ನು ಸಂಭ್ರಮಿಸುತ್ತಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. 'ಒಂದು ಜಿಲ್ಲೆ, ಒಂದು ಉತ್ಪನ್ನ' ಸ್ಥಳೀಯ ಕುಶಲಕರ್ಮಿಗಳಿಗೆ ಅತ್ಯಂತ ಪ್ರಮುಖ ಕಾರ್ಯಕ್ರಮವಾಗಿದ್ದು, ಈ ಉಪಕ್ರಮವು ಕುಶಲಕರ್ಮಿಗಳಿಗೆ ತರಬೇತಿ, ಸಂಪನ್ಮೂಲ ಹಾಗೂ ಮಾರುಕಟ್ಟೆ ಪ್ರವೇಶವನ್ನು ಕಲ್ಪಿಸಿದೆ. ಆಕಾಶವಾಣಿ ಸುದ್ದಿವಿಭಾಗದೊಂದಿಗೆ ಮಾತನಾಡಿದ ಕುಶಲಕರ್ಮಿ ನಿತಿನ್ ಪಾಲ್, 'ಒಂದು ಜಿಲ್ಲೆ, ಒಂದು ಉತ್ಪನ್ನ' ಯೋಜನೆಯಿಂದ ಸಾವಯವ ಕಬ್ಬಿನ ಉತ್ಪನ್ನಗಳ ವ್ಯಾಪಾರ ಅಭಿವೃದ್ಧಿಪಡಿಸಲು ಸಹಕಾರಿಯಾಗಿದೆ. ಜನರು ತಮ್ಮ ಉತ್ಪನ್ನಗಳನ್ನು ಉತ್ಸುಕತೆಯಿಂದ ಖರೀದಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

**ಧ್ವನಿ: ಕುಶಲಕರ್ಮಿ ನಿತಿನ್ ಪಾಲ್,**

ಕೌಶಾಂಬಿಯ ಮತ್ತೊಬ್ಬ ಕುಶಲಕರ್ಮಿ ಬ್ರಿಜೇಶ್ ಕುಮಾರ್ ಮಿಶ್ರಾ, ಕುಂಭಮೇಳಕ್ಕೆ ಆಗಮಿಸುತ್ತಿರುವ ಭಕ್ತಾದಿಗಳು ನಮ್ಮ ಉತ್ಪನ್ನಗಳನ್ನು ಖರೀದಿಸಲು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಎಂದು ಹೇಳಿದರು. 'ಒಂದು ಜಿಲ್ಲೆ, ಒಂದು ಉತ್ಪನ್ನ' ಉಪಕ್ರಮವು ದೇಶದ ಪ್ರತಿಯೊಂದು ಜಿಲ್ಲೆಯಿಂದ ಸ್ಥಳೀಯ ಉತ್ಪನ್ನಗಳನ್ನು ಉತ್ತೇಜಿಸಲು ಸಹಾಯ ಮಾಡುತ್ತಿದೆ. ಜನವರಿ ೧೩ರಂದು ಪ್ರಾರಂಭವಾದ ಮಹಾಕುಂಭ ಮೇಳವು ಫೆಬ್ರವರಿ ೨೬ರವರೆಗೆ ಮುಂದುವರೆಯುತ್ತದೆ.

**<><*<><>*><>**

ನವದೆಹಲಿಯಲ್ಲಿ ನಾಳೆ ಭಾರತೀಯ ನೌಕಾಪಡೆಯ ಹಾಫ್ ಮ್ಯಾರಥಾನ್‌ನ ಉದ್ಘಾಟನಾ ಆವೃತ್ತಿ ನಡೆಯಲಿದೆ. ಈ ಕಾರ್ಯಕ್ರಮ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿದ್ದು, ಓಟದ ಮಾರ್ಗ ಇಂಡಿಯಾ ಗೇಟ್ ಮತ್ತು ಐತಿಹಾಸಿಕ ಕರ್ತವ್ಯ ಪಥವನ್ನು ಒಳಗೊಂಡಿದೆ. ೨೧.೧ ಕಿಲೋಮೀಟರ್, ೧೦ ಕಿಲೋಮೀಟರ್ ಮತ್ತು ೫ ಕಿಲೋಮೀಟರ್ ಓಟಗಳಂತಹ ಒಟ್ಟು ಮೂರು ಓಟದ ವಿಭಾಗಗಳಲ್ಲಿ ೧೦ ಸಾವಿರಕ್ಕೂ ಹೆಚ್ಚು ಜನರು ಸ್ಪರ್ಧಿಸುವ ನಿರೀಕ್ಷೆಯಿದೆ. ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಹಿರಿಯ ಅಧಿಕಾರಿಗಳು, ಸಶಸ್ತ್ರ

ಪಡೆಗಳ ಸಿಬ್ಬಂದಿ, ನಾಗರಿಕರು ಮತ್ತು ಪ್ರಸಿದ್ಧ ಕ್ರೀಡಾಪಟುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

**<><*<><>*><>**

ಭಾರತದಲ್ಲಿ ಹೊಸದಾಗಿ ನಾಲ್ಕು ರಾಮ್‌ಸರ್ ಜೌಗು ತಾಣಗಳನ್ನು ಕೇಂದ್ರ ಸರ್ಕಾರ ಘೋಷಿಸಿದೆ. ಇದರಿಂದಾಗಿ ದೇಶದಲ್ಲಿ ರಾಮ್‌ಸರ್ ಜೌಗು ತಾಣಗಳ ಸಂಖ್ಯೆ ೮೯ಕ್ಕೆ ಏರಿಕೆಯಾಗಿದೆ. ವಿಶ್ವ ಜೌಗು ಪ್ರದೇಶ ದಿನದ ಹಿನ್ನೆಲೆಯಲ್ಲಿ ತಮಿಳುನಾಡಿನ ಸಕ್ಕರಕೋಟ್ಟೈ ಪಕ್ಷಿಧಾಮ, ತೀರ್ಥಂಗಲ್ ಪಕ್ಷಿಧಾಮ, ಸಿಕ್ಕಿಂನ ಖೆಚಿಯೋಪಾಲ್ರಿ ಜೌಗು ಪ್ರದೇಶ ಮತ್ತು ಜಾರ್ಖಂಡ್‌ನ ಉಧ್ವಾ ಸರೋವರವನ್ನು ದೇಶದ ರಾಮ್‌ಸರ್ ಜೌಗು ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ತಿಳಿಸಿದೆ.

**<><*<><>*><>**

ಮಲೇಷಿಯಾದ ಕೌಲಾಲಂಪುರದಲ್ಲಿ ಇಂದು ನಡೆಯಲಿರುವ ೧೯ ವರ್ಷದೊಳಗಿನ ಮಹಿಳೆಯರ ಐಸಿಸಿ ಟಿ-೨೦ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೧೨ ಗಂಟೆಗೆ ಆರಂಭವಾಗಲಿದೆ. ಮತ್ತೊಂದೆಡೆ, ಮುಂಬೈನ ವಾಖಂಡೆ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಅಂತಾರಾಷ್ಟ್ರೀಯ ಟಿ-೨೦ ಸರಣಿಯ ಐದನೇ ಪಂದ್ಯದಲ್ಲಿ ಭಾರತ ತಂಡ, ಇಂಗ್ಲೆಂಡ್ ವಿರುದ್ಧ ಸೆಣಸಲಿದೆ. ಪಂದ್ಯ ರಾತ್ರಿ ೭ ಗಂಟೆಗೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**